ಇತ್ತೀಚಿನ ದಿನಗಳಲ್ಲಿ ನಿರೀಕ್ಷಿಸಲಾಗುತ್ತಿದೆ, ವಿಶೇಷವಾಗಿ ಸಾಮಾಜಿಕ ಕಾರ್ಯಕರ್ತ. ಈ ಬಗ್ಗೆ ನಿಮ್ಮ ಅಭಿಪ್ರಾಯ ಏನು? ನೀವು ನಿಮ್ಮನ್ನು ಕಾರ್ಯಕರ್ತೆ ಎಂದುಕೊಳ್ಳುವಿರಾ?

ಇಲ್ಲ. ಬರಹಗಾರ ಕಾರ್ಯಕರ್ತನಲ್ಲ, ಅವನೊಬ್ಬ ಕಲಾವಿದ. ಆದರೆ, ಬರಹಗಾರ ಒಬ್ಬ ಬಂಡಾಯಗಾರ; ಸಮಾಜದಲ್ಲಿನ ಎಲ್ಲ ಅನ್ಯಾಯ, ವೈರುಧ್ಯಗಳ ವಿರುದ್ಧ ದಂಗೆ ಏಳುತ್ತಾನೆ.

◆ ನೀವು 'ಒಪಿಎಸ್‌ಸಿ' ಸದಸ್ಯರಾಗಿರುವಾಗ ನಿಮಗಾದ ಕೆಲವು ಸಂತೋಷದಾಯಕ ಮತ್ತು ಕಹಿ ಅನುಭವಗಳನ್ನು ಹಂಚಿಕೊಳ್ಳಬಹುದೇ?

ನನ್ನ ಆರು ವರ್ಷಗಳ ಅಧಿಕಾರಾವಧಿಯಲ್ಲಿ ಅಭ್ಯರ್ಥಿಗಳನ್ನು ಸಂದರ್ಶಿಸುವುದು ಮತ್ತು ಅವರಿಗೆ ನ್ಯಾಯ ಒದಗಿಸುವುದು ಅತ್ಯಂತ ಸಂತೋಷದ ಕ್ಷಣಗಳಾಗಿದ್ದವು. ನಾನು ಅಂದಿನ 'ಒಪಿಎಸ್‌ಸಿ' ಅಧ್ಯಕ್ಷರ ಭ್ರಷ್ಟಾಚಾರದ ವಿರುದ್ಧ ಪ್ರತಿಭಟಿಸಿದಾಗ ನನಗೆ ಕಹಿ ಅನುಭವವಾಯ್ತು. ಕೊನೆಗೂ ಒಸಿಎಸ್‌ಇ ಅಭ್ಯರ್ಥಿಗಳಿಗೆ ನ್ಯಾಯ ಸಿಕ್ಕಿತು. ಆದರೆ, ಅಧ್ಯಕ್ಷರು ನನ್ನ ವಿರುದ್ಧ ಹಾಕಿದ ಒಂದು ಕೋಟಿ ರೂಪಾಯಿಗಳ ಮಾನನಷ್ಟ ಮೊಕದ್ದಮೆಯನ್ನು ಎದುರಿಸಬೇಕಾಯಿತು. ಏಳು ವರ್ಷಗಳ ಕಾಲ ನಾನು ನ್ಯಾಯಾಲಯದಲ್ಲಿ ಹೋರಾಡಿದೆ. ನನ್ನ ಸ್ವಂತದ ಹಣವನ್ನು ಖರ್ಚು ಮಾಡಿದೆ. ಅಂತಿಮವಾಗಿ ಪ್ರಕರಣವನ್ನು ವಜಾ ಮಾಡಲಾಯಿತು.



◆ ನಿಮ್ಮ ಬರವಣಿಗೆಯ ಉದ್ದೇಶ, ಕಾಳಜಿ ಮತ್ತು ಶಕ್ತಿ ಏನೆಂದು ನೀವು ಭಾವಿಸುತ್ತೀರಿ?

ನನ್ನ ಬರವಣಿಗೆಯ ಶಕ್ತಿ ಅದರ ಆಳ ಎಂದು ನಾನು ಅಂದುಕೊಳ್ಳುತ್ತೇನೆ.

◆ ನಿಮ್ಮ ಪಾತ್ರಗಳೊಂದಿಗೆ ಒಂದಾಗುವ ಪ್ರಕ್ರಿಯೆಯನ್ನು ವಿವರಿಸುತ್ತೀರಾ? ಅದು ಪರಕಾಯ ಪ್ರವೇಶವೇ?

ನನಗೆ ಅದು ಪರಕಾಯ ಪ್ರವೇಶವಲ್ಲ; ಆತ್ಮ ಪ್ರವೇಶ. ನೀವು ನಿಮ್ಮ ಪಾತ್ರದೊಂದಿಗೆ ಒಂದಾಗುತ್ತೀರಿ. ಸಮಯ, ವಸ್ತು ಮತ್ತು ಪಾತ್ರಗಳು ನಿಮ್ಮ ಸೃಜನಶೀಲ ಸ್ವಂತಿಕೆಯಲ್ಲಿ ವಿಲೀನಗೊಳ್ಳುತ್ತವೆ. ಬರಹಗಾರರಿಗೆ ತನ್ನದೇ ಆದ ಅವನ ಅಥವಾ ಅವಳ ಭಾಷೆಯನ್ನು ಬಳಸುವ ಸ್ವಾತಂತ್ರ್ಯ ಇರುವುದಿಲ್ಲ. ಪಾತ್ರಗಳು ತಾವು ಬದುಕಿದ ಕಾಲ ಮತ್ತು ಪ್ರದೇಶದ ಭಾಷೆಯಲ್ಲಿ ಮಾತನಾಡುತ್ತವೆ.

◆ ನೀವು ಸಾಮಾನ್ಯ ವಸ್ತು-ವಿಷಯಗಳಿಗೆ ಅತೀಂದ್ರಿಯ (ಮಾಂತ್ರಿಕ) ಸ್ಪರ್ಶವನ್ನು ನೀಡುತ್ತೀರಿ ಮತ್ತು ಅತೀಂದ್ರಿಯವನ್ನು ಆಧ್ಯಾತ್ಮಿಕವಾಗಿ ಪರಿವರ್ತಿಸುತ್ತೀರಿ. ಈ ಮಾಂತ್ರಿಕತೆಯನ್ನು ಸಾಧಿಸಲು ನಿಮ್ಮ ಭಾಷೆಯನ್ನು ಹೇಗೆ ಹುರಿಗೊಳಿಸುತ್ತೀರಿ ಅಥವಾ ಮುರಿದು ಕಟ್ಟುತ್ತೀರಿ?

ಅಭಿವ್ಯಕ್ತಿಯ ಮಾಧ್ಯಮವಾಗಿ ಬಳಸಲಾಗುವ ಭಾಷೆಯು ಒಂದು ಸಂಸ್ಕೃತಿಯಿಂದ ಕಲಿತ ಅಥವಾ ಎರವಲು ಪಡೆದ ಬಾಹ್ಯ ವಸ್ತುವಲ್ಲ. ಭಾಷೆಯು ಬರಹಗಾರನ ಮನಸ್ಸಿನ ಭಾಗವೇ. ಆಯ್ದ ಪ್ರತಿಯೊಂದು ಪದವೂ ಅಗತ್ಯವಾಗಿ ಬೇಕಾದದ್ದೇ. ಅಲ್ಲದೆ ಅದು ಬರವಣಿಗೆಯು ಸಂಸ್ಕೃತಿ ಹಾಗೂ ಪಾತ್ರದ ಭಾವ ಮತ್ತು ಸಂವೇದನೆಗಳನ್ನು ಒಳಗೊಂಡಿರುತ್ತದೆ. ಸಾಹಿತ್ಯದ ಪ್ರಭಾವ ಮತ್ತು ಪರಿಣಾಮಗಳು ಭಾಷೆಯನ್ನು ಅನ್ವಯಿಸುವ ಮತ್ತು ಪದಗಳ ನಡುವೆ ಸರಿಯಾದ ಸಂಬಂಧಗಳನ್ನು ಸ್ಥಾಪಿಸುವ ಕಲೆಯನ್ನು ಅವಲಂಬಿಸಿರುತ್ತದೆ. ನಾನು ಬರೆಯುತ್ತಿರುವಾಗ ವಿಭ್ರಮೆಯಲ್ಲಿರುತ್ತೇನೆ.